ಓ.ಎಸ್.ನಂ.**9/2011**
ಡಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **27.10.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**

ಅಸಲು ದಾವೆ ಸಂಖ್ಯೆಃ **368/2006** ರ ದಾವೆ ಹಾಕುವ ಪೂರ್ವದಲ್ಲೇ ನನ್ನ ಜೊತೆ ಕರಾರು ಪತ್ರವಾಗಿದ್ದ ಕಾರಣ ರಾಮಕ್ಕನವರು ನನ್ನನ್ನು ಸದರಿ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಸದರಿ ಕೇಸನ್ನು ನಡೆಸಿದ್ದೀರಿ? ಎಂದರೆ ಸಾಕ್ಷಿಯು ನಮಗೆ ನೋಟೀಸ್ ಬಂದಿದ್ದ ಕಾರಣ ನಾನು ಹಾಜರಾಗಿದ್ದೆನು ಎಂದು ಹೇಳುತ್ತಾರೆ. ಯಾವ ಕಾರಣಕ್ಕಾಗಿ ನಿಮಗೆ ನೋಟೀಸ್ ನೀಡಲಾಗಿತ್ತು ಎಂದು ಈ ದಾವೆಯಲ್ಲಿ ತಿಳಿಸಿದ್ದೀರಾ? ಎಂದರೆ ಇಲ್ಲ. ಕ್ರಯದ ಮಾತುಕತೆಗೂ ಮತ್ತು ಕ್ರಯಪತ್ರಕ್ಕೂ ಕೇವಲ ಒಂದು ವಾರ ಅಂತರವಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರವಾಗುವ ಆರು ತಿಂಗಳ ಮೊದಲೇ ಮಾತುಕತೆಯಾಗಿತ್ತು ಈ ಕಾರಣದಿಂದ ನನ್ನನ್ನು ಅಸಲು ದಾವೆ ಸಂಖ್ಯೆಃ**368/2006** ರಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಈ ದಾವಾ ಸ್ವತ್ತನ್ನು ಸೇರಿಸಲಾಗಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಸದರಿ ದಾವೆಯ ದಾವಾ ಪತ್ರ ಮತ್ತು ಷಡ್ಯೂಲ್ ನ್ನು ತೋರಿಸಿ ಅದರಲ್ಲಿ ಸರ್ವೆ ನಂ.**123/3**ರಲ್ಲಿ **19** ಗುಂಟೆ ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿಯು ಸದರಿ ದಾವಾಪತ್ರ ನನಗೆ ಬಂದಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ಲಿಖಿತ ಹೇಳಿಕೆ ಸಲ್ಲಿಸುವಾಗ ದಾವಾಪತ್ರದಲ್ಲಿ ಇರುವ ಅಂಶವನ್ನು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ಸದರಿ ಕೇಸ್‌ನ ತೀರ್ಪು ಏನಾಗಿದೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಆಂಜಿನಪ್ಪನವರು ರಾಮಕ್ಕನಿಗೆ ಜೀವನಾಂಶ ಕೊಡಬೇಕೆಂದು ದಾವಾ

ಆಸ್ತಿಯ ಮೇಲೆ ಡಿಕ್ರಿಯಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ರಾಮಕ್ಕನಿಗೆ ಆಂಜಿನಮ್ಮ ಎಂಬ ಮಗಳಿದ್ದಳು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಆಂಜಿನಮ್ಮನವರಿಗೆ ಭಾಗ ಇರುವ ವಿಚಾರ ನನಗೆ ಗೊತ್ತಿದ್ದರೂ ಕೂಡ ಅವರನ್ನು ಬಿಟ್ಟು ಕರಾರು ಪತ್ರವನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆಂಜಿನಮ್ಮನವರಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಆಂಜಿನಪ್ಪ ಮತ್ತು ನಾವು ಸೇರಿ ರಾಮಕ್ಕ ಮತ್ತು ಅವರ ಮಗಳಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.